aglasem.com

FOR KARNATAKA CLASS 12 PREPARATION

Karnataka 2nd PUC Model Question Paper 2027 for Kannada (Paper 4)

EXAM	YEAR	TYPE	SUBJECT
Karnataka Class 12	2027	Sample Paper	Kannada

ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560003

2026-27 ಸಾಲಿನ ದ್ವಿತೀಯ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ - 4

ವಿಷಯ: ಕನ್ನಡ (01) **ಗರಿಷ್ಠ ಅಂಕಗಳು: 80**

ಸಮಯ: 3 ಗಂಟೆಗಳು **ಒಟ್ಟು ಪ್ರಶ್ನೆಗಳ ಸಂಖ್ಯೆ: 52**

ಸೂಚನೆ: ೧. "ಅ-ವಿಭಾಗ"ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ-ವಿಭಾಗ

(ಅ) ಈ ಕೆಳಗಿನ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. (10x1=10)

1. ಉರಿಲಿಂಗಪೆದ್ದಿ ಹೇಳುವಂತೆ ಮಂಗಳಲಿಂಗ ಅಂಗದ ಮೇಲಿದ್ದವನು ಯಾವುದನ್ನು ನೆನೆಯುವುದಿಲ್ಲ?

   ಅ) ಅನ್ಯಲಿಂಗವನ್ನು ಆ) ಸಂಪತ್ತನ್ನು

   ಇ) ಕೆಟ್ಟದ್ದನ್ನು ಈ) ದೀಪವನ್ನು

2. ಹಲವು ಹಳ್ಳಗಳು ಸೇರಿ ಏನಾಗುವುದೆಂದು ಕವಿ ಸೋಮನಾಥನ ಅಭಿಪ್ರಾಯ?

   ಅ) ನದಿ ಆ) ಕಾಲುವೆ

   ಇ) ಕೆರೆ ಈ) ಸಮುದ್ರ

3. ದುರ್ಗಂಧ ಬಿಡದಿರುವುದು ಯಾವುದೆಂದು ಪುರಂದರದಾಸರು ಹೇಳಿದ್ದಾರೆ?

   ಅ) ಸಿಂಹ ಆ) ಊರಹಂದಿ

   ಇ) ಹುಲಿ ಈ) ನಾಯಿ

4. 'ಬಾನ್ ಹೊಗರಲುಂಟು, ಮರ ಚಿಗುರಲುಂಟು ಬರಲುಂಟೆ ಸುಗ್ಗಿ ಮತ್ತೆ?

   ಮುಳುಗಿರಲಿ ಮುಪ್ಪು ಚಿಂತನದಿ, ತಾನು ಹರೆಯಕ್ಕೆ ಬೇರೆ ಹೊತ್ತೆ?' ಈ ಪದ್ಯಭಾಗಕ್ಕೆ ಸಂಬಂಧಿಸಿದಂತೆ

   ಈ ಕೆಳಗಿನ ಯಾವ ಜೋಡಿ ಹೊಂದಾಣಿಕೆ ಆಗುತ್ತದೆ .

   ಒಂದು) ಚಿಗುರು – ಮುಪ್ಪು ಎರಡು) ಮುಪ್ಪು - ಚಿಂತೆ

   ಮೂರು) ಹರೆಯ - ಸುಗ್ಗಿ ನಾಲ್ಕು) ಹರೆಯ - ಮುಪ್ಪು

   ಅ) ಒಂದು ಮತ್ತು ಎರಡು ಸರಿ ಆ) ಎರಡು ಮತ್ತು ಮೂರು ಸರಿ

   ಇ) ಮೂರು ಮತ್ತು ನಾಲ್ಕು ಸರಿ ಈ) ನಾಲ್ಕು ಮತ್ತು ಮೂರು ಸರಿ

5. ಕವಯಿತ್ರಿ ಸುಕನ್ಯಾ ಮಾರುತಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ?

   ಅ) ಬಡತನಕ್ಕೆ ಆ) ಅಹಂಕಾರಕ್ಕೆ

   ಇ) ದೀನದಲಿತತನಕ್ಕೆ ಈ) ಸೋಮಾರಿತನಕ್ಕೆ

aglasem.com For more Question Papers, Sample Papers, Notes & Syllabus visit aglasem.com

6. " ಬದುಕು ಸದಾ ಅದೃಷ್ಟಗಳನ್ನು ನಮ್ಮತ್ತ ಎಸೆಯದಿದ್ದರೂ, ಬದುಕು ನೂರು, ಸಾವಿರ ಅವಕಾಶಗಳನ್ನು ನಮ್ಮೆದುರು ತೆರೆಯುತ್ತದೆ. ಎಂಥ ಕೆಟ್ಟ ಸಂದರ್ಭದಲ್ಲೂ ನಮ್ಮೆದುರು ಆಯ್ಕೆಗಳಿರುತ್ತವೆ.' - "ಆಯ್ಕೆಯಿದೆ ನಮ್ಮ ಕೈಯಲ್ಲಿ," ಗದ್ಯದ ಈ ಸಾಲುಗಳು ಕೆಳಗಿನ ಯಾವ ಹೇಳಿಕೆಯನ್ನು ಸಮರ್ಥಿಸುತ್ತವೆ.

ಅ) ಅವಕಾಶಗಳ ಸದುಪಯೋಗ ಮಾಡಿಕೊಳ್ಳಬೇಕು. ಆ) ಅದೃಷ್ಟಕ್ಕಾಗಿ ಕಾಯಬೇಕು.
ಇ) ಶುಭದಿನಕ್ಕಾಗಿ ಕಾಯಬೇಕು. ಈ) ಹಣೆಬರಹವನ್ನು ದೂಷಿಸುತ್ತಿರಬೇಕು.

7. ಕನ್ನಡವು ಕಸೂರಿಯಲ್ಲವೆ! ಎಂದು ಹೇಳಿದವರು

ಅ) ಮುದ್ದಣ ಆ) ಮನೋರಮೆ
ಇ) ಮಹಾವೀರ ಈ) ನಾರಣಪ್ಪ

8. ನಿರೂಪಕರ ಗೆಳೆಯ ಪ್ರಕಾಶ್ ಅವರು.

ಅ) ಸೋಶಿಯಾಲಜಿಸ್ಟ್ ಆ) ಎಕನಾಮಿಸ್ಟ್
ಇ) ಸೈಕಿಯಾಟ್ರಿಸ್ಟ್ ಈ) ಇಕಾಲಜಿಸ್ಟ್

9. "ಅಲ್ರಿ ನಾಗರಾಜ್ ಇವು ಯಾವುದಾದರೂ ತೀರ್ಮಾನ ಆಗೋ ಕೇಸುಗಳೇನ್ರಿ, ನೀವು ಬೇರೆ ಡಿಪಾರ್ಟ್ಮೆಂಟಿಗೆ ಬುದ್ಧಿ ಕಲಿಸ್ತೀನಿ ಅಂದ್ರಲ್ಲಾ ಹಾಗೇ ಅವರೂನೂ ನಿಮಗೆ ಕಲಿಸಬೇಕು ಅಂತಿರ್ತಾರೆ. ಕಲಿಯೋದಕ್ಕೆ ಯಾರಾದರೂ ತಯ್ಯಾರಿದ್ರೆ ತಾನೆ ಕೇಸು ತೀರ್ಮಾನ ಆಗೋದು" - ಹೀಗೆಂದು ನಿರೂಪಕರು ನಾಗರಾಜನಿಗೆ ಹೇಳಿದ ಮಾತಿನಲ್ಲಿ ವ್ಯಕ್ತವಾಗಿರುವ ಭಾವ.

ಅ) ಡಿಪಾರ್ಟ್ಮೆಂಟ್ ಗಳ ನಡುವಿನ ಹೊಂದಾಣಿಕೆಯ ಕೊರತೆ.
ಆ) ಡಿಪಾರ್ಟ್ಮೆಂಟ್ ಗಳ ನಡುವಿನ ಸರಿಯಾದ ಹೊಂದಾಣಿಕೆ.
ಇ) ಎಲೆಕ್ಟ್ರಿಕ್ ಡಿಪಾರ್ಟ್ಮೆಂಟ್ ನ ನಿರ್ಲಕ್ಷ್ಯ.
ಈ) ಫಾರೆಸ್ಟ್ ಡಿಪಾರ್ಟ್ಮೆಂಟ್ ನ ಸರಿಯಾದ ಕ್ರಮ.

10. ಆನೆಯ ಕಾಲಿಗೆ ಸರಪಳಿ ಕಟ್ಟಿದೆ ಇರಲು ಕೃಷ್ಣೇಗೌಡ ಸಭೆಗೆ ಕೊಟ್ಟ ಕಾರಣ.

ಅ) ಆನೆ ಲಾಯದ ಒಳಗೇ ಇರುತ್ತದೆ. ಆ) ಆನೆಯನ್ನು ಹಿಡಿಯಲಾಗದು.
ಇ) ಆನೆಯ ಕಾಲಿಗೆ ಗಾಯವಾಗಿದೆ. ಈ) ಆನೆ ಸರಪಳಿಯನ್ನೂ ಕಿತ್ತುಕೊಳ್ಳುತ್ತದೆ.

(ಆ) ಬಿಟ್ಟಸ್ಥಳಗಳಿಗೆ ಆವರಣದಲ್ಲಿ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5x1=5)**

(ಒಕ್ಕಲ ಮಕ್ಕಳನ್ನು, ವಿಜ್ಞಾನಿ, ಸಿನಿಮಾ, ಬಡತನ, ಸುಳ್ಳು, ಉದ್ಯೋಗದ)

11. ಕೊನೆಗೆ ಬಸಲಿಂಗ .....ಗಳಿಂದ ಮುಕ್ತನಾಗಿದ್ದ.
12. ..... ವಿಷಯದಲ್ಲಿ ಕನ್ನಡಿಗರು ಭೀತಿಗೊಂಡಿದ್ದಾರೆ.
13. ಧಣಿ ಎಂದಿಗೂ ..... ನಂಬುವುದಿಲ್ಲ.
14. ಮಗುವೇ ಭೂಮಿಯ ಮೇಲಿನ ಮೊದಲ .....
15. ಹಳ್ಳಿಯ ಹೊಟೇಲುಗಳಲ್ಲಿ ಈಗ ..... ದೇವತೆಗಳ ದರ್ಶನವಾಗುತ್ತದೆ.

(ಇ) 16. ಹೊಂದಿಸಿ ಬರೆಯಿರಿ. **(5x1=5)**

(ಅ) ರಾಮಚಂದ್ರಚರಿತ ಪುರಾಣ	೧) ಚಿಟ್ಟೆ ಮತ್ತು ಜೀವಯಾನ
(ಆ) ಜಾಲಿಯ ಮರದಂತೆ	೨) ಚಂಪೂ ಕೃತಿ
(ಇ) ವ್ಯಕ್ತಿಪರ ಕವನಗಳು	೩) ನಾಗಚಂದ್ರ
(ಈ) ಟಿ. ಯಲ್ಲಪ್ಪ	೪) ಹರಹರಾ ಶ್ರೀಚೆನ್ನಸೋಮೇಶ್ವರಾ
(ಊ) ಪುಲಿಗೆರೆ ಸೋಮನಾಥ	೫) ಪುರಂದರದಾಸರು
	೬) ಕೆ. ಎಸ್. ನಿಸಾರ್ ಅಹಮದ್

ಆ-ವಿಭಾಗ

(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

17. ರಾವಣನು ಸೊಕ್ಕಿನಿಂದ ಸೀತೆಯನ್ನು ಉದ್ದೇಶಿಸಿ ಆಡಿದ ಮಾತುಗಳಾವುವು?
18. ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?
19. ಬಾನು ಮತ್ತು ಮರದ ನಿತ್ಯ ನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?
20. ಕ್ರಿಸ್ಮಸ್ ಮನೆಗೆ ಏನನ್ನು ಹೊತ್ತು ತಂದಿದೆ?

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(2x2=4)**

21. ಕಣ್ಣನ್ನು ಪರೀಕ್ಷಿಸಿದ ಡಾ. ತಿಮ್ಮಪ್ಪ ಬಸಲಿಂಗನಿಗೆ ಏನೆಂದು ಹೇಳಿದರು?
22. ಕರ್ನಾಟಕದಲ್ಲಿ ಕನ್ನಡಕ್ಕೆ ಯಾವ ಸ್ಥಾನವಿರಬೇಕೆಂದು ಹಾಮಾನಾ ಅಪೇಕ್ಷಿಸಿದ್ದಾರೆ?
23. ಕಲಾಂ ಅವರ ಬದುಕಿನ ಮಂತ್ರ ಯಾವುದು?
24. ವೀರೇಂದ್ರ ಸಿಂಪಿಯವರ ಪ್ರಕಾರ ಭಾವೈಕ್ಯತೆ ಈ ದೇಶದಲ್ಲಿ ಎಲ್ಲಿದೆ?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ. **(3x2=6)**

25. ದುರ್ಗಪ್ಪ ಏಕೆ ಬಂದಿರಬಹುದೆಂದು ನಿರೂಪಕರು ಯೋಚಿಸಿದರು?
26. ಆನೆಯನ್ನು ರಾತ್ರೋರಾತ್ರಿ ಎಲ್ಲಿಗೆ ಏಕೆ ಕರೆದುಕೊಂಡು ಹೋದರು?
27. ನಾಯನ್ನು ಕೊಲ್ಲದೆ ನೌಕರರು ಸುಳ್ಳು ಹೇಳಿರುವರೆಂದು ನಿರೂಪಕರು ಯಾವ ಸಲಹೆ ನೀಡಿದರು?
28. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

ಇ-ವಿಭಾಗ

(ಅ) ಯಾವುದಾದರೂ ಎರಡು ವಾಕ್ಯಗಳ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(2x3=6)**

29. ಯಮಸುತಂಗರುಹುವೆನೆ ಧರ್ಮಕ್ಷಮೆಯ ಗರ ಹೊಡೆದಿಹುದು.
30. ಹಬ್ಬಲಿ ಅವರ ರಸಬಳ್ಳಿ.
31. ಪಾಪ ಮುದುಕ ದೂರದ ಅಸ್ಸಾಮಿನಲ್ಲಿ

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. **(1x3=3)**

32. ನೀನು ಅವರನ್ನು ನೋಡಿದರೆ ಮಾತ್ರ ಇರುವ ಒಂದು ಕಣ್ಣು ಉಳಿಯುತ್ತೆ.
33. ಮತ್ತೆ ಅವರಿಗೆ ಮೂತ್ರಪಿಂಡದ ಕಲ್ಲು ಕಾಣಿಸಿರಲಿಲ್ಲ.
34. ನಿನಗಾವ ರಸದೊಳಿಷ್ಟಂ?

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. (1x3=3)

35. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ.

36. ಈ ಕಂಬದೊಳ್ಗೆ ಏನೋ ಸೇರ್ಕೊಂಡಿದೆ.

ಈ-ವಿಭಾಗ

(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (2x4=8)

37. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

38. ರಕ್ಷಿಸಬೇಕಾದವರೇ ಭಕ್ಷಕರಾದರೆ ಒದಗುವ ವಿಘಟನೆಯನ್ನು ಬಸವಣ್ಣನವರು ಹೇಗೆ ಚಿತ್ರಿಸಿದ್ದಾರೆ?

39. ಮಗು ಕಲಿತದ್ದನ್ನು ಮತ್ತು ವಿದ್ಯಾಭ್ಯಾಸ ಮಾಡುವ ವಿವರಗಳನ್ನು ವಿಶ್ಲೇಷಿಸಿ.

40. ಈ ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.

ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು

ಅ. ಪದ್ಯಭಾಗದಲ್ಲಿ ಮಾನಾರ್ಥವೆನೆ ನಿರ್ಗಮಿಸುವ ಆ ಉಳಿದವರು ಯಾರು? **(1 ಅಂಕ)**

ಆ. ನೀನೇ ಸೂಕ್ತವಾದವನು ಎಂದು ಯಾರನ್ನು ಕುರಿತು ಹೇಳಲಾಗಿದೆ? **(1 ಅಂಕ)**

ಇ. ದ್ರೌಪದಿ ಕೈಮುಗಿದು ಏನೆಂದು ಪ್ರಾರ್ಥಿಸುತ್ತಾಳೆ? **(2 ಅಂಕ)**

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

41. ಅಂತರಾಷ್ಟ್ರೀಯ ವಿದ್ಯಮಾನಗಳಿಂದಾಗಿ ವಾಲ್‌ಪರೈಗೆ ಒದಗಿದ ಸಮಸ್ಯೆಗಳೇನು?

42. ಮುಸುರೆ ಪಾತ್ರೆಗಳು ನೀರು ಪಾಲಾದುದು ಹೇಗೆ? ಅವುಗಳನ್ನು ಮೇಲೆತ್ತಲು ಮಾಡಿದ ಪ್ರಯತ್ನಗಳೇನು?

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. (1x4=4)

43. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

44. ವೇಲಾಯುಧನ ಸಾವಿನ ಸಂದರ್ಭವನ್ನು ಚಿತ್ರಿಸಿ.

ಉ-ವಿಭಾಗ

(ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. (4x2=8)

45. ಕೆಳಗಿನ ಎರಡು ಪದಗಳಿಗೆ **ಸಮಾನಾರ್ಥಕಗಳನ್ನು** ಬರೆಯಿರಿ.

ನಾರಿ, ಪಥ, ಮಾರ

46. ಕೆಳಗಿನ ಎರಡು ಪದಗಳ **ಗುಣವಾಚಕಗಳನ್ನು** ಬರೆಯಿರಿ.

ಘೋರಪಾತಕಿ, ಹೆಮ್ಮರ, ಮಣ ಆಯಾಸ

47. ಕೆಳಗಿನ ಎರಡು ಕ್ರಿಯಾಪದಗಳ **ನಿಷೇಧ ರೂಪಗಳನ್ನು** ಬರೆಯಿರಿ.

ನೋಡುವಳು, ಬರುವರು, ತಿಂದನು

48. ಕೆಳಗಿನ ಎರಡು **ನುಡಿಗಟ್ಟುಗಳನ್ನು** ನಿಮ್ಮ **ಸ್ವಂತವಾಕ್ಯಗಳಲ್ಲಿ** ಬಳಸಿ ಬರೆಯಿರಿ.

ಬಣ್ಣ ಬಯಲಾಗು, ಕಾಲುಕೀಳು, ಕಪಿಮುಷ್ಠಿ

49. ಕೆಳಗಿನ ಎರಡು ಪದಗಳ **ವಿಭಕ್ತಿಗಳನ್ನು** ಹೆಸರಿಸಿ.

ಧರೆಯೊಳ್, ಮಾರ್ಷ್ಗೆ, ಕಣ್ಣಿನ ದೆಸೆಯಿಂದ

50. ಕೆಳಗಿನ ಎರಡು ಪದಗಳ **'ತದ್ಭವ' ರೂಪ** ಬರೆಯಿರಿ.

ಕಸ್ತೂರಿ, ವಸತಿ, ಆಕಾಶ

(ಆ) ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. (1x4=4)

51. ಐತಿಹಾಸಿಕ ಸ್ಥಳಗಳ ಸಂರಕ್ಷಣೆಯ ಮಹತ್ವ

ಅಥವಾ

ಕಂಪ್ಯೂಟರ್ ಸಾಕ್ಷರತೆ ಮತ್ತು ಆಧುನಿಕ ಜಗತ್ತು

(ಇ) ಯಾವುದಾದರೂ ಒಂದು ವಿಷಯವನ್ನು ಕುರಿತು ಪತ್ರ ಬರೆಯಿರಿ. (1x4=4)

52. ಮಲ್ಲಿಕಾ/ಮಹದೇವ, ದ್ವಿತೀಯ ಪಿಯುಸಿ, ಸಂತ ಜೋಸೆಫರ ಪದವಿ ಪೂರ್ವ ಕಾಲೇಜು, ಶಿರಾ ರಸ್ತೆ, ಪಾವಗಡ, ತುಮಕೂರು ಜಿಲ್ಲೆ- ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ಸುಮಿತ್ರಮ್ಮ, # 48, ಗಾಂಧಿ ರಸ್ತೆ, ಅಂಬೇಡ್ಕರ್ ನಗರ, ನಾಗಮಂಗಲ, ಮಂಡ್ಯ ಜಿಲ್ಲೆ - ಈ ವಿಳಾಸದಲ್ಲಿರುವ ನಿಮ್ಮ ತಾಯಿಗೆ **ವಾರ್ಷಿಕ ಪರೀಕ್ಷೆಗೆ ನೀವು ಮಾಡಿಕೊಡಿರುವ ಸಿದ್ಧತೆಯನ್ನು** ಕುರಿತು ಪತ್ರ ಬರೆಯಿರಿ.

ಅಥವಾ

ಗೌತಮ್/ಯಶೋಧಾ, ದ್ವಿತೀಯ ಪಿಯುಸಿ, ಸರ್ಕಾರಿ ಪದವಿ ಪೂರ್ವ ಕಾಲೇಜು, ಹೆಬ್ಬಗೋಡಿ, ಆನೇಕಲ್ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ- ಈ ವಿಳಾಸದಲ್ಲಿರುವವರು ನೀವೆಂದು ಭಾವಿಸಿ, ವ್ಯವಸ್ಥಾಪಕರು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಜಿಗಣಿ ಮುಖ್ಯ ರಸ್ತೆ, ಹೆಬ್ಬಗೋಡಿ-560099 ಇವರಿಗೆ ನಿಮ್ಮ ಹೆಸರಿನಲ್ಲಿ ಒಂದು **ಉಳಿತಾಯ ಖಾತೆ ತೆರೆಯುವಂತೆ** ಕೋರಿ ಪತ್ರ ಬರೆಯಿರಿ.

* * * * * * * *